**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 23-07-2019**

**ಪಾಟೀ ಸವಾಲು - ಶ್ರೀ. A.R.S.R.,** ಪ್ರತಿವಾದಿ 1 ರಿಂದ 3, 10 ಮತ್ತು 11 ರವರ ಪರ **ವಕೀಲರಿಂದ**

ನನ್ನ ತಂದೆ ಈಗ ಹಾಲಿ ಯಾವುದೇ ಕೆಲಸ ಮಾಡುತ್ತಿಲ್ಲ. ಅವರಿಗೆ ತಮ್ಮ ದೈನಂದಿನ ಕೆಲಸಗಳನ್ನೂ ಸಹ ಮಾಡಿಕೊಳ್ಳಲು ಆಗುವುದಿಲ್ಲ. ಈ ರೀತಿ ಕಳೆದ ನಾಲ್ಕು ವರ್ಷದಿಂದ ಆಗುತ್ತಿಲ್ಲ. ನನಗೆ ಈ ಕೇಸಿನ ಮಾಹಿತಿ ಸ್ವತಃ ತಿಳಿದಿರುತ್ತದೆ. ನನ್ನ ತಂದೆಗೆ ಮೇಲೆ ಹೇಳಿದ ರೀತಿಯಲ್ಲಿ ತೊಂದರೆ ಇರುವ ಬಗ್ಗೆ ದಾಖಲಾತಿ ಕೊಡಲು ತೊಂದರೆ ಇಲ್ಲ. ನನ್ನ ತಂದೆಗೆ ಬುದ್ದಿ ಮತ್ತು ಜ್ಞಾನ ಇರುವುದಿಲ್ಲ. ಆದ ಕಾರಣ ನನ್ನ ತಂದಗೆ ಈ ದಾವೆಯಲ್ಲಿ ಏನು ಸಾಕ್ಷ್ಯ ಕೊಟ್ಟಿದ್ದೇನೆ ಎಂದು ಗೊತ್ತಿಲ್ಲ ಎಂದರೆ ಸರಿ. ನನ್ನ ತಂದೆ ಈ ದಾವೆ ಸಲ್ಲಿಸುವಾಗ ವಕೀಲರಿಗೆ ಏನು ಮಾಹಿತಿ ಕೊಟ್ಟಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ಅವರು ನಾಲ್ಕು ಜಮೀನುಗಳ ಸಬಂಧ ಈ ಕೇಸು ಹಾಕಿರುತ್ತಾರೆ. ನಾಲ್ಕು ಜಮೀನುಗಳ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. ನಾಲ್ಕೂ ಜಮೀನುಗಳ ಸಂಬಂಧ ಸಾಕ್ಷಿ ಹೇಳಲು ಆಗುತ್ತದೆ.

2) ದಾವಾ ಐಟಂ ನಂ.1 ಮತ್ತು 4 ರ ಮೇಲೆ ನನಗೆ ಯಾವುದೇ ಹಕ್ಕು ಇರುವುದಿಲ್ಲ. ಸದರಿ ಆಸ್ತಿ ಪ್ರತಿವಾದಿ 10 ಮತ್ತು 11 ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನಲ್ಲಪ್ಪ ಇವರ ತಂದೆಯ ಹೆಸರು ಗೊತ್ತಿರುವುದಿಲ್ಲ. ನಲ್ಲಪ್ಪನವರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಯಾವುದೂ ಇರುವುದಿಲ್ಲ ಎಂದರೆ ಸರಿಯಲ್ಲ. ಅವುಗಳೆಂದರೆ ದಾವಾ ಐಟಂ ನಂ.2 ಮತ್ತು 3. ನಲ್ಲಪ್ಪ ರವರ ತಂದೆ ಯಾವುದೇ ಜಮೀನುಗಳನ್ನು ಸಂಪಾದನೆ ಮಾಡಿರುವುದಿಲ್ಲ. ನಲ್ಲಪ್ಪ ಆಸ್ತಿಗಳನ್ನು ಯಾವ ರೀತಿ ಸಂಪಾದನೆ ಮಾಡಿದ್ದಾರೆಂದು ಗೊತ್ತಿಲ್ಲ. ನಲ್ಲಪ್ಪ ಖರೀದಿ ಮಾಡಿದ ಆಸ್ತಿ ಯಾವುದೂ ಇರುವುದಿಲ್ಲ.

3) ನನ್ನ ತಂದ ಪ್ರತಿವಾದಿ 10 ಮತ್ತು 11 ರವರಿಗೆ ಸೇರಿದ ಐಟಂ ನಂ.1 ಮತ್ತು 4 ರ ಸಂಬಂಧ ದಾವೆಯನ್ನು ವಾಪಸ್ಸು ಪಡೆದಿರುತ್ತೇವೆ. ನನ್ನ ತಂದೆಯು ಹೆಸರಿನಲ್ಲಿ ಯಾವುದೇ ಜಮೀನುಗಳು ಇರವುದಿಲ್ಲ. ನಾವು ವಾಸವಾಗಿರುವ ಮನೆ ಯಾರ ಹೆಸರಿನಲ್ಲಿದೆ ಎಂದು ಗೊತ್ತಿಲ್ಲ. ನನ್ನ ತಾಯಿಯ ಹೆಸರು ರತ್ನಮ್ಮ ಎಂದರೆ ಸರಿ, ಅವರ ಹೆಸರಿನಲ್ಲಿ ಒಂದು ಮನೆ ಇದೆ ಎಂದರೆ ಗೊತ್ತಿಲ್ಲ. **ನಿ.ಪಿ.7 ಸುಳ್ಳು ದಾಖಲಾತಿಯಾಗಿರುತ್ತದೆ.** ಈ ದಾಖಲಾತಿಯನ್ನು ನ್ಯಾಯಾಲಯಕ್ಕೆ ಯಾರು ಹಾಜರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 1 ರಿಂದ 10 ರವರ ಹೆಸರಿನಲ್ಲಿ ಯಾವುದಾದರೂ ಪ್ರತ್ಯೇಕ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಅವರ ಹೆಸರಿನಲ್ಲಿ ಪ್ರತ್ಯೇಕವಾಗಿ ಇರುವ ಆಸ್ತಿಗಳ ಸಂಬಂಧ ದಾಖಲಾತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಿ.ಪಿ.6 ರಿಂದ 10 ದಾಖಲಾತಿಗಳು ಅವರ ಹೆಸರಿಗೆ ಯಾವ ಆಧಾರದ ಮೇರೆಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಈ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಯಾರು ಹಾಜರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 10 ನೇ ಪ್ರತಿವಾದಿ ಈ ದಾವೆಯಲ್ಲಿ ಏನು ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

4) ನನ್ನ ತಾಯಿಯ ಹೆಸರಿನಲ್ಲಿ ಖಾತೆ ನಂ.8174/2 ಅಳತೆ 41X60 ಮನೆ ಇದೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರಿಗೆ ಖಾತೆ ನಂ.353/90 ಮತ್ತು ಮೇಲೆ ಹೇಳಿದ ಮನೆ ವಿಭಾಗದಲ್ಲಿ ಬಂದಿದೆ ಎಂದರೆ ಸರಿಯಲ್ಲ. ನನ್ನ ತಂದೆ ತಾನು ವಾಸವಾಗಿರುವ ಮನೆಯ ಬಗ್ಗೆ ಖಾತೆ ಮಾಡಿಕೊಡುವಂತೆ ಕೋರಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ನನ್ನ ತಂದೆಯ ಸಹಿಯನ್ನು ಗುರುತಿಸಲು ಅಗುವುದಿಲ್ಲ. ಆದ್ದರಿಂದ ನನ್ನ ತಂದೆ ಎಲ್ಲಿ ಸಹಿಗಳನ್ನು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

5) ನನ್ನ ತಾತ ನಲ್ಲಪ್ಪ ಇವರ ಕುಟುಂಬಕ್ಕೆ ಸೇರಿದ ಸರ್ವೆ ನಂ.38 ಮತ್ತು 291/4 ಜಮೀನುಗಳು ಇದೆ ಎಂದರೆ ಸರಿ. ಅದರಲ್ಲಿ ನಮ್ಮ ತಂದೆಗೆ ಹಕ್ಕು ಇದೆ ಎಂದರೆ ಸರಿ. ನನ್ನ ತಂದೆಗೆ ಸದರಿ ಜಮೀನುಗಳಲ್ಲಿ 23 ಗುಂಟೆ ಮತ್ತು 2 ಗುಂಟೆ ಬರಬೇಕು ಎಂದರೆ ಸರಿ. ಈ ಜಮೀನುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳಲ್ಲೂ ಸಹ ನಾನು ಭಾಗ ಕೇಳಿರುತ್ತೇನೆ ಮತ್ತು ದಾಖಲಾತಿ ಹಾಜರು ಮಾಡಿರುತ್ತೇನೆ.

6) 1988 ರಲ್ಲಿ ನಮ್ಮ ತಂದೆಯ ಕುಟುಂಬದಲ್ಲಿ ಏನು ವ್ಯವಹಾರ ಆಗಿದೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ದಿ.10-02-1988 ರಲ್ಲಿ ನಲ್ಲಪ್ಪನಿಗೆ ಸೇರಿದ ಆಸ್ತಿಗಳನ್ನು ಅವರ ಸಹೋದರರು ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರಿಕೆಯಲ್ಲಿ ಮೇಲೆ ತಿಳಿಸಿದ ಎರಡು ಸರ್ವೆ ನಂಬರುಗಳ ಬಗ್ಗೆ ಏನೂ ಹೇಳಿಲ್ಲ. ಪ್ರಮಾಣ ಪತ್ರಿಕೆ ಸಲ್ಲಿಸುವಾಗ ಸದರಿ ಎರಡು ಸರ್ವೆ ನಂಬರುಗಳ ಬಗ್ಗೆ ನನಗೆ ಗೊತ್ತಿರಲಿಲ್ಲ.

7) ಸರ್ವೆ ನಂ.59/3 ಒಟ್ಟು 17 ಗುಂಟೆ ಇದೆ. ಈ ಸರ್ವೆ ನಂಬರ್ ಬಗ್ಗೆ ಬೇರೆ ಯಾವುದೇ ಇಲಾಖೆಗಳ ಮುಂದೆ ಕೇಸು ನಡೆದಿರುವುದಿಲ್ಲ. ಬಸಪ್ಪ ಮತ್ತು ಮುನಿಯಪ್ಪ ಎಂಬುವವರು ದಾವಾ ಐಟ ನಂ.2 ರ ಸಂಬಂಧ ಗೇಣಿ ಅರ್ಜಿ ಹಾಕಿದ್ದರು ಎಂದರೆ ಸರಿ. ಸದರಿ ಅರ್ಜಿಯ ಸಂಬಂಧ 6 ಗುಂಟೆ ಮುನಿಯಪ್ಪ ಎಂಬವರಿಗೆ ಹೋಗಿದೆ. 17 ಗುಂಟೆ ನಲ್ಲಪ್ಪರವರಿಗೆ ಆಗಿರುತ್ತದೆ. ಈ ಸಂಬಂಧ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸರ್ವೆ ನಂ.59/3 ರ ಸಂಬಂಧ ನಮ್ಮ ಕುಟುಂಬಕ್ಕೆ ಯಾವುದೇ ಮಾಲೀಕತ್ವದ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಐಟಂ

ನಂ.2 ಮೊದಲು ಮುನಿಯಪ್ಪ ಮತ್ತು ಇನ್ನೊಬ್ಬ ಮಹಿಳೆಗೆ ಸೇರಿತ್ತು. ನಮ್ಮ ಕುಟುಂಬಕ್ಕೆ ಈ ಆಸ್ತಿ ಬಂತು ಎಂದು ತೋರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿ ನಮ್ಮ ಕುಟುಂಬಕ್ಕೆ ಬಂದಿದೆ ಎಂದು ತೋರಿಸಲು ಪಹಣಿ ಮತ್ತು ಗ್ರ್ಯಾಂಟ್ ಸರ್ಟಿಫಿಕೇಟ್ ಇದೆ. ನನ್ನ ಬಳಿ ಸದರಿ ಗ್ರಾಂಟ್ ಸರ್ಟಿಫಿಕೇಟ್ ಇರುವುದಿಲ್ಲ. ಸದರಿ ಆಸ್ತಿ ನಮ್ಮ ಕುಟುಂಬದ ಸ್ವತ್ತಲ ಮತ್ತು ನಮ್ಮ ತಂದಗೆ ಯಾವುದೇ ಭಾಗ ಇರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂ.3 ರ ಸಂಬಂಧ ಈಗಾಗಲೇ ದಿ.10-02-1988 ರಲ್ಲಿ ವಿಭಾಗವಾಗಿರುವ ಕಾರಣ ನಮ್ಮ ತಂದೆಗೆ ಈ ಆಸ್ತಿಗಳ ಮೇಲೆ ಯಾವುದೇ ಹಕ್ಕು ಇರವುದಿಲ್ಲ ಎಂದರೆ ಸರಿಯಲ್ಲ, ಸದರಿ ವಿಭಾಗ ಪತ್ರವನ್ನು ಒಪ್ಪಿಕೊಂಡು ನಮ್ಮ ತಂದೆ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

8) 9ನೇ ಪ್ರತಿವಾದಿ ಮದುವೆಯಾಗಿ 50 ವರ್ಷವಾಗಿದ್ದು ಆ ದಿನದಿಂದ ಯಾವತ್ತೂ ಬೆಟ್ಟದ ಪುರದಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿಯಲ್ಲ. 9ನೇ ಪ್ರತಿವಾದಿಯ ಯಾವ ವಿಳಾಸ ನನ್ನ ತಂದೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. 9ನೇ ಪ್ರತಿವಾದಿ ಮದುವೆಯಾದ ದಿನದಿಂದ ಬೆಂಗಳೂರಿನ ಮಲ್ಲೇಶ್ವರಂ ನಲ್ಲಿ ವಾಸವಿದ್ದಾರೆ ಎಂದರೆ ಸರಿ. 9ನೇ ಪ್ರತಿವಾದಿಯನ್ನು ನಾವೇ ಕರೆದುಕೊಂಡು ನಮಗೆ ಅನುಕೂಲವಾಗುವ ರೀತಿಯಲ್ಲಿ ತಕರಾರು ಈ ನ್ಯಾಯಾಲಯದಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯ ತಿಳಿಯುತ್ತದೆ ಎಂದು ನಿ.ಪಿ.1ನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಈಗಾಗಲೇ ವಿಭಾಗವಾಗಿರುವ ಕಾರಣ ನಮ್ಮ ತದೆಗೆ ಯಾವುದೇ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ನ್ನು ನನ್ನ ತಂದೆಯ ಗಮನಕ್ಕೆ ಬಾರದಂತೆ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು – 14ನೇ ಪ್ರತಿವಾದಿ ವಾದಿ ಪರ ವಕೀಲರಿಂದ – ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರಿದ ಪಾಟೀ ಸವಾಲು ಮಾಡಿರುತ್ತಾರೆ.**

ದಾವಾ ಐಟಂ ನಂ.2 ಮುನಿವೆಂಕಟಪ್ಪ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸ್ವಯಾರ್ಜಿತ ಆಸ್ತಿಯಾದ ಕಾರಣ ಸದರಿ ಜಮೀನಿನಲ್ಲಿ 11 ಗುಂಟೆಯನ್ನು 13ನೇ ಪ್ರತಿವಾದಿಗೆ ಅವರು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಾರ್ವತಮ್ಮ ದಿ.24-02-2007 ರಲ್ಲಿ 14ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಈ ದಾವೆ ಚಾಲ್ತಿಯಲ್ಲಿದ್ದಾಗ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ಸರಿದ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲಾ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ.**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**